ಪ್ರತಿಬಿಂಬ

**PRATIBIMBA –Multidisciplinary Kannada Research Journal of IIMRD**
**ISSN: 2582-2284**
**Vol-5 Issue 3, November-December, 2023, Pp. 52-64.**
**©*IIMRD*, Mysuru**
IIMRD JOURNALS

**www.iimrd.com**

# ದಲಿತ ಬಂಡಾಯ ಕಾವ್ಯ ಮತ್ತು ಪ್ರಭುತ್ವ

**ಹನುಮಂತರಾಯ. ಈ**

*ಸಂಶೋಧನಾ ವಿದ್ಯಾರ್ಥಿ, ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ವಿದ್ಯಾರಣ್ಯ

**ಸಾರಾಂಶ: (Abstract)**

*ನಾಗರಿಕ ಬದುಕಿಗೆ ತೆರೆದುಕೊಳ್ಳದ ಬುಡಕಟ್ಟು ಸಾಮಾಜದಲ್ಲಿಯೂ ತಮ್ಮದೇ ಆದ ಕಾನೂನು ಕಟ್ಟಳೆಯನ್ನು ರೂಪಿಸಿಕೊಂಡು ಯಜಮಾನಿಕೆಯ ಪ್ರಭುತ್ವವು ರಚನೆಗೊಂಡಿರುತ್ತದೆ. ಇನ್ನು ನಾಗರಿಕ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಬದುಕುತ್ತಿರುವ ನಾವುಗಳು ಒಂದು ವ್ಯವಸ್ಥಿತ ಸಂವಿಧಾನದ ಕಾನೂನು ಚೌಕಟ್ಟಿನ ಒಳಗೆ ಪ್ರಭುತ್ವದಿಂದ ಆಳಲ್ಪಡುತ್ತಿದ್ದೇವೆ. 'ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರಜೆಗಳೇ ಪ್ರಭುಗಳು' ಆಗಬೇಕಿದ್ದ ಇಂದಿನ ವ್ಯವಸ್ಥೆಯಲ್ಲಿ ಪ್ರಜಾಪ್ರಭುತ್ವ ಮೌಲ್ಯಗಳು ಮಾಯವಾಗಿ ಅನ್ಯಾಯ, ಅಕ್ರಮ, ಪ್ರಜಾವಿರೋಧಿ ಧೋರಣೆಯಿಂದ ನಮ್ಮನ್ನ ಆಳುವ ಸರ್ಕಾರ ಅಥವಾ ಪ್ರಭುತ್ವದ ಬಗೆಗೆ ದಲಿತ ಬಂಡಾಯ ಕಾವ್ಯ ಪ್ರಶ್ನಿಸುತ್ತದೆ ಮತ್ತು ಪ್ರತಿಭಟಿಸುತ್ತದೆ. ಪ್ರಭುತ್ವದ ಜನವಿರೋಧಿ ನಿಲುವುಗಳನ್ನು ವಿರೋಧಿಸುವ ಮನೋಧೋರಣೆ ಪಂಪನಿಂದ ಆರಂಭವಾಗಿ ಇಂದಿನ ದಲಿತ ಬಂಡಾಯ ಸಾಹಿತ್ಯದವರೆಗೂ ಕಾಣಬಹುದು.*

**ಮುಖ್ಯಪದಗಳು (Keywords):** ಕನ್ನಡ ಸಾಹಿತ್ಯ, ದಲಿತ ಸಾಹಿತ್ಯ, ಬಂಡಾಯ ಸಾಹಿತ್ಯ, ಕಾವ್ಯ ಮತ್ತು ಪ್ರಭುತ್ವ..

**ಪೀಠಿಕೆ**

ಪಂಪನ ಸಾಹಿತ್ಯದಲ್ಲಿ ತನ್ನ ಕಥಾನಾಯಕ ಅರ್ಜುನನೊಂದಿಗೆ ಅರಿಕೇಸರಿಯನ್ನು ಸಮೀಕರಿಸಿದ್ದರೂ ಕೂಡ ಅವನ ನಿಲುವುಗಳು ಜನಪರವಾಗಿರುವುದನ್ನು ಕಾಣಬಹುದಾಗಿದೆ. "ಮಾನವ ಕುಲಂ ತಾನೊಂದೇ ವಲಂ" ಎಂಬ ಪಂಪನ ಮಾತಿನಲ್ಲಿ ಜನಪರ ಕಾಳಜಿಯನ್ನು ತಿಳಿಸುವುದರ ಜೊತೆಗೆ ಪ್ರಭುತ್ವವನ್ನು ದಿಕ್ಕರಿಸುವ ಅಥವಾ ಗೌಣವಾಗಿಸುವ(ನಗಣ್ಯವಾಗಿಸುವ) ಸಂದರ್ಭವನ್ನು ಗಮನಿಸಬಹುದು. ಕರ್ಣ ಹಾಗೂ ದುರ್ಯೋಧನನ ಬಗೆಗೆ ಪಂಪನು ವಕಾಲತ್ತು ವಹಿಸುವುದು ಶೋಷಿತಪರ ನಿಲುವುಗಳನ್ನು ಸಾಭೀತುಪಡಿಸುತ್ತದೆ. ವಚನ ಚಳುವಳಿಯಲ್ಲಿಯೂ ಪ್ರಭುತ್ವ ವಿರೋಧಿ ನಿಲುವುಗಳನ್ನು ಗುರುತಿಸಬಹುದು. ಬಿಜ್ಜಳನ ಆಶ್ರಯದಲ್ಲಿದ್ದು, ಪ್ರಭುತ್ವದ ಭಾಗವಾದ ಮಂತ್ರಿ ಪದವಿಯಲ್ಲಿದ್ದರೂ ಸಹ ಬಸವಣ್ಣನ ಮಾತುಗಳು ಅಚ್ಚರಿ ಉಂಟುಮಾಡುತ್ತವೆ.

***"ತಾಳಮಾನ ಸರಿಸವನರಿಯೆ***
***ಓಜೆ ಬಜಾವಣೆಯ ಲೆಕ್ಕವನರಿಯೆ***
***ಅಮೃತಗಣ ದೇವಗಣವನರಿಯೆ***
***ಕೂಡಲ ಸಂಗಮದೇವಾ ನಿನಗೆ ಕೇಡಿಲ್ಲವಾಗಿ***
***ಆನುವೊಲಿದಂತೆ ಹಾಡುವೆ"*** (ಚಿದಾನಂದ ಮೂರ್ತಿ ಎಂ, ವಚನ ಸಾಹಿತ್ಯ, ಪು.56)

*Please cite this article as:* ಹನುಮಂತರಾಯ. ಈ. (2023). ದಲಿತ ಬಂಡಾಯ ಕಾವ್ಯ ಮತ್ತು ಪ್ರಭುತ್ವ. *ಪ್ರತಿಬಿಂಬ: ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 5(3). ಪು.ಸಂ.* 52–64

ಎಂಬ ವಚನದಲ್ಲಿ ಪ್ರಭುತ್ವದ ಬಗೆಗೆ ಬಸವಣ್ಣನ ವಿರೋಧಿ ಧೋರಣೆ ಮತ್ತು ಪ್ರಭುತ್ವವನ್ನು ಮೀರುವುದು ವಚನ ಸಾಹಿತ್ಯದ ಒಟ್ಟು ಆಶಯದಂತೆ ಕಾಣುತ್ತದೆ. ಹೀಗೆ ಎಲ್ಲಾ ಕಾಲದ ಸಾಹಿತ್ಯವು ಎಲ್ಲೆಲ್ಲಿ ಪ್ರಭುತ್ವವನ್ನು ವಿರೋಧಿಸಬೇಕೊ ಅಲ್ಲಿ ಯಾವುದೇ ಮುಲಾಜಿಲ್ಲದೆ ವಿರೋಧಿಸಿದೆ.

ದಲಿತ ಬಂಡಾಯ ಸಾಹಿತ್ಯವು ಎಲ್ಲಾ ಸಾಹಿತ್ಯ ಘಟ್ಟಗಳಿಗಿಂತ ಹೆಚ್ಚು ಪ್ರಖರವಾಗಿ ಮತ್ತು ವ್ಯಾಪಕವಾಗಿ ಒಂದು ಸೈದ್ಧಾಂತಿಕ ಮನೋಭೂಮಿಕೆಯಾಗಿ ಸ್ವೀಕರಿಸಿ ಪ್ರಭುತ್ವವನ್ನು ವಿರೋಧಿಸಿದೆ ಹಾಗೂ ಅದರ ಹುಳುಕುಗಳನ್ನು ಬಯಲಿಗೆಳೆದಿದೆ. ಅದರಲ್ಲಿಯೂ ದಲಿತ ಬಂಡಾಯ ಕಾವ್ಯ ಪ್ರಕಾರ ಪ್ರಭುತ್ವ ವಿರೋಧಿ ಮನೋಧೋರಣೆ ಕುರಿತು ಕಟುವಾಗಿ ಪ್ರತಿಕ್ರಿಯೆ ನೀಡಿದೆ. ಸಿದ್ಧಲಿಂಗಯ್ಯ ಅವರ 'ದಲಿತರು ಬರುವರು ದಾರಿಬಿಡಿ ದಲಿತರ ಕೈಗೆ ರಾಜ್ಯಕೊಡಿ' ಎಂಬ ಕಾವ್ಯದ ಸಾಲುಗಳು ಇಲ್ಲಿಯವರೆಗೂ ದಲಿತರು ಶೋಷಣೆಗೆ ಗುರಿಯಾಗಿ ಬೇರೆಯವರಿಂದ ಆಳಿಸಿಕೊಂದು ಬಂದಿದ್ದು ಸಾಕು, ಇನ್ನು ರಾಜ್ಯಾಧಿಕಾರವನ್ನು ಇಡಿಯಬೇಕಿದೆ, ಅದರಿಂದಲೇ ದಲಿತರು ಶೋಷಣೆಯಿಂದ ಮುಕ್ತಿಹೊಂದಲು ಸಾಧ್ಯ ಎಂಬ ಸ್ಪಷ್ಟ ನಿಲುವನ್ನು ವ್ಯಕ್ತಪಡಿಸಿದೆ.

***"ಮಾನವತೆಯನ್ನ ನಂಬುವ ಯಾವನು ಕ್ಷಮಿಸುತ್ತಾನೆ***
***ಬರ್ಬರ ಯುದ್ಧಗಳನ್ನ?***
***ನೆಲದಾಹದ ರಾಕ್ಷಸರ ಕ್ರೂರತನದಿಂದಾಗಿ ಪಾಳಾದ ಬಾಳುಗಳ***
***ವಿಧವೆಯರ ಗೋಳುಗಳ ಕೇಳಿ***
***ಕರಗದವರು ಯಾರು ಹೇಳು?***
***ಮಾನವನ ಮಿದುಳಲ್ಲಿ ಸಿಟ್ಟನ್ನು ಇಟ್ಟವರಾರು?***
***ತನ್ನನ್ನು ತಾನು ಕೊಂದುಕೊಳ್ಳುವ ಅವನತಿಗೆ***
***ಅವನನ್ನು ತಳ್ಳಿದವರಾರು?***
***ಹೇಳು ಯಾವ ಸೂಳೆಮಗ ಸೃಷ್ಟಿಸಿದ ಯುದ್ಧಗಳನ್ನ?"***

*(ಮುಳ್ಳೂರು ನಾಗರಾಜ್ ಸಮಗ್ರ ಸಾಹಿತ್ಯ, ಸಂಪುಟ–2, ಪುಟ–18)*

ಯುದ್ಧವು ಜೀವವಿರೋಧಿ ಹಾಗೂ ಮಾನವ ವಿರೋಧಿಯಾಗಿದೆ. ಯುದ್ಧದಲ್ಲಿ ಸಾಯುವವರು ಜನಸಾಮಾನ್ಯರೇ ಆಗಿದ್ದಾರೆ. ಪ್ರಭುತ್ವ ಯಾವಾಗಲೂ ಹುಸಿ ಮೌಲ್ಯಗಳನ್ನು ಹುಟ್ಟುಹಾಕಿ ಅಮಾಯಕ ಜನರನ್ನು ನಂಬಿಸುತ್ತದೆ. 'ಯುದ್ಧದಲ್ಲಿ ಹೋರಾಡಿ ಮಡಿದರೆ ವೀರ ಸ್ವರ್ಗ, ದೇಶಕ್ಕಾಗಿ ಪ್ರಾಣಕೊಟ್ಟರೆ ಕೋಟಿ ಪುಣ್ಯಗಳು ಲಭಿಸುತ್ತವೆ. ವೀರ ಭೂಮಿಯಲ್ಲಿ ಮಡಿದರೆ ಸ್ವರ್ಗ ಪ್ರಾಪ್ತಿ.' ಈ ರೀತಿಯ ಹುಸಿ ಮೌಲ್ಯಗಳನ್ನು ಹುಟ್ಟಿಸಿ. ಅಮಾಯಕ ಜನರನ್ನು ಮೋಸ ಮಾಡುತ್ತದೆ. ಚರಿತ್ರೆಯ ಉದ್ದಕ್ಕೂ ನಡೆದು ಬಂದಿದ್ದು ಇದೆ. ಯಾವ ರಾಜ ಎಷ್ಟು ಕೋಟೆ ಕಟ್ಟಿಸಿದ, ಎಷ್ಟು ಸಾಮ್ರಾಜ್ಯ ವಿಸ್ತರಿಸಿದ, ಎಷ್ಟು ಯುದ್ಧಗಳನ್ನು ಗೆದ್ದ ಎಂಬುದನ್ನು ವೈಭವೀಕರಿಸುತ್ತದೆ. ಆದರೆ ಆ ಯುದ್ಧದಲ್ಲಿ ಮಡಿದ ಸೈನಿಕರಾಗಲಿ, ಆ ಸೈನಿಕರ ಹೆಂಡತಿ–ಮಕ್ಕಳ ಸ್ಥಿತಿ ಏನಾಯಿತು ಎಂಬುದನ್ನು ಇತಿಹಾಸ ಹೇಳುವುದಿಲ್ಲ. ಆದ್ದರಿಂದ ಇತಿಹಾಸವು ಅರ್ಧ ಸತ್ಯವಾಗಿದೆ ಮತ್ತು ಪ್ರಭುತ್ವ ಪರವಾದ ಇತಿಹಾಸವಾಗಿದೆ. ಇದನ್ನೇ ದಲಿತ ಬಂಡಾಯ ಕಾವ್ಯ ಪ್ರಶ್ನಿಸಿದೆ. ಪ್ರಭುತ್ವದ ಸಾಮ್ರಾಜ್ಯ ವಿಸ್ತರಣೆಯ ಕ್ರೂರ ವ್ಯಾಮೋಹ ಜನಸಾಮಾನ್ಯರನ್ನು ಯುದ್ಧಕ್ಕೆ

ಬಳಸಿಕೊಂಡು ಅವರನ್ನು ಬಲಿಕೊಡುವ ಪಾಶಾವಿತನವನ್ನು ದಲಿತ ಬಂಡಾಯ ಕಾವ್ಯ ಬಯಲಿಗೆಳೆದಿದೆ. ನಮ್ಮ ಇತಿಹಾಸ ಯಾವುದನ್ನು ಮುಚ್ಚಿಟ್ಟಿತ್ತೋ ಅದನ್ನು ದಲಿತ ಬಂಡಾಯ ಕಾವ್ಯ ಎತ್ತಿ ತೋರಿಸಿದೆ. ಇದೇ ನಿಜವಾದ ಇತಿಹಾಸ ಎಂದು ಮನವರಿಕೆ ಮಾಡಿದೆ. ಯುದ್ಧ ರಹಿತ ಸಾಮರಸ್ಯದ ಸಮಸಮಾಜವನ್ನು ಹಾಗೂ ಜನರ ಶಾಂತಿ, ಸಹಬಾಳ್ವೆಯ ಬದುಕನ್ನು ಬಯಸಿದೆ.

*"ನನ್ನ ನಾಡಿನ ಜನಕೋಟಿಯ ಉಪವಾಸದಲಿ ಸಿಕ್ಕು*
*ಬೆಂಕಿಯಾಗಿ ಊರಾಳುವರಸರು ಉರಿದು ಹೋದರಲ್ಲಾ*
*ಸುಳ್ಳು ಚರಿತ್ರೆ ಪುಸ್ತಕದ ಕಾಡುಗಳಲ್ಲಿ*
*ಖಾಲಿ ಇಸವಿಗಳ ಹೊರತು ಬೇರೇನೂ ಇರಲಿಲ್ಲ*
*ಕಲಾವಿದರು ಗೈದ ಗೋರಿಗಳಲ್ಲಿ ಸಾವಿರಾರು*
*ಸಾವುಗಳ ನೆರಳಿದೆಯಲ್ಲಾ*
*ಹಲವು ರಾಜ್ಯ ಹಲವು ಸಾಮ್ರಾಜ್ಯ*
*ರಾಜ ಮಹಾರಾಜರುಗಳ ದರಬಾರುಗಳನ್ನ*
*ಸುಟ್ಟುಬಿಟ್ಟಿವೆ ಬಂಡಾಯದ ನಿಟ್ಟುಸಿರು*
*ಕಾಲದಡವಿಯಲ್ಲಿ ಮಣ್ಣಾದರು ಮನುಜರು*
*ಕುಲದ ಕೇಡಿನಲ್ಲಿ ದಾರಿ ತಪ್ಪಿದರು ದೇವರು"*

(ಮುಳ್ಳೂರು ನಾಗರಾಜ್ ಸಮಗ್ರ ಸಾಹಿತ್ಯ ಸಂಪುಟ–2, ಪುಟ–96)

ಈ ನಾಡು, ಈ ದೇಶವನ್ನು ಕಟ್ಟಿದವರು ಸಾಮಾನ್ಯ ಜನವರ್ಗ. ಆದರೆ ಅವರ ಹೆಸರು ಚರಿತ್ರೆಯ ಪುಟಗಳಲ್ಲಿ ದಾಖಲಾಗದೇ ಹೋಗಿರುವುದು ದುರಂತ. ಅದಕ್ಕೆ ದಲಿತ ಬಂಡಾಯ ಕಾವ್ಯ ಯಾರು ಚರಿತ್ರೆಯ ಪುಟದಲ್ಲಿ ನಿಜವಾಗಿಯೂ ಸ್ಥಾನ ಪಡೆಯಬೇಕಾಗಿತ್ತೋ ಅವರನ್ನು ಹೊಸ ಚರಿತ್ರೆಯಲ್ಲಿ ದಾಖಲಿಸುವ ಕೆಲಸವನ್ನು ಮಾಡುತ್ತಿದೆ. ಹಿಂದೆ ರಚನೆಯಾದ ಅರ್ಧ ಸತ್ಯದ ಚರಿತ್ರೆನ್ನು ದಲಿತ ಬಂಡಾಯ ಕಾವ್ಯ ಸಾರಸಗಟಾಗಿ ತಿರಸ್ಕರಿಸಿದೆ. 'ಸುಳ್ಳು ಚರಿತ್ರೆ' ಎಂದು ಹೇಳಿದ ಮೇಲೆ ಅದಕ್ಕೆ ಪರ್ಯಾಯವಾದ ಚರಿತ್ರೆಯನ್ನು ಹೇಳಬೇಕಾಗಿರುವುದು ಅದರ ಮುಂದಿರುವ ದೊಡ್ಡ ಸವಾಲು. ಆ ಸವಾಲನ್ನು ಸ್ವೀಕರಿಸಿ ಸಾಕ್ಷಿ ಸಮೇತವಾಗಿ ನಿಜವಾದ ಜನಕೇಂದ್ರಿತ ಚರಿತ್ರೆಯನ್ನು ಕಟ್ಟಿಕೊಟ್ಟಿದೆ. ಆ ನಿಜವಾದ ಚರಿತ್ರೆ ಯಾವುದು ಎಂದು ಕೇಳಿದರೆ ಸಾವಿರಾರು ಕಲಾವಿದರು, ಯುದ್ಧದಲ್ಲಿ ಜೀವತೆತ್ತ ಸೈನಿಕರು, ರಾಜ್ಯದ ರಕ್ಷಣೆಗಾಗಿ ಗೋರಿಯಾದ ಸಾವಿರಾರು ಜನಗಳ ಸಾವುಗಳು ನಿಜವಾದ ಇತಿಹಾಸ ಎಂದು ದಲಿತ ಬಂಡಾಯ ಕಾವ್ಯ ಹೇಳುತ್ತಿದೆ. ಸ್ಥಾಪಿತ ಚರಿತ್ರೆಯಲ್ಲಿರುವುದು ಕೇವಲ ಖಾಲಿ ಇಸವಿಗಳು ಮಾತ್ರ ಅದು ಸತ್ಯಕ್ಕೆ ದೂರವಾದದ್ದು ಎಂಬುದು ದಲಿತ ಬಂಡಾಯ ಕಾವ್ಯದ ಧೋರಣೆ.

ಇತಿಹಾಸದಲ್ಲಿ ಎಷ್ಟೋ ರಾಜರು ಸಾಮ್ರಾಜ್ಯಗಳು ತಮ್ಮ ದುರಾಡಳಿತದ ಮೇರೆಯನ್ನು ಮೀರಿದಾಗ ಬಂಡಾಯವೆದ್ದ ಸಾಮಾನ್ಯ ಜನರು ಸಾಮ್ರಾಜ್ಯಗಳ ಪಥನಕ್ಕೆ ಕಾರಣರಾಗಿದ್ದಾರೆ. ಇದನ್ನೂ ಸಹ ಇತಿಹಾಸದಲ್ಲಿ ಕಾಣಬಹುದು. ಪ್ರಭುತ್ವವು ಒಂದು ಹಂತದವರೆಗೆ ಜನರ ಮೇಲೆ ಅಧಿಕಾರವನ್ನು ಚಲಾಯಿಸಬಹುದು. ಅದು ಅತಿರೇಕಕ್ಕೆ ಹೋದಾಗ ಬಂಡಾಯದ ಬಿಸಿಯುಸಿರಿಗೆ ತುತ್ತಾಗಬೇಕಾಗುತ್ತದೆ.

ಇದು ಕೇವಲ ರಾಜ, ಮಹಾರಾಜರುಗಳಿಗೆ ಮಾತ್ರವಲ್ಲ ಕುಲದ ಕೇಡಿನಲ್ಲಿ ದಾರಿತಪ್ಪುವ ದೇವರುಗಳಿಗೂ ಇಂತಹ ಬಂಡಾಯದ ಬಿಸಿಯುಸಿರು ತಾಗಿರುವುದು ಪುರಾಣದಲ್ಲಿ ಕಾಣಬಹುದು. ಹೀಗೆ ದಲಿತ ಬಂಡಾಯ ಕಾವ್ಯ ಮುಚ್ಚಿಟ್ಟ ಚರಿತ್ರೆಯನ್ನು ಬಯಲುಮಾಡಿದೆ. ಅದು ಜನಸಾಮಾನ್ಯರ ಚರಿತ್ರೆಯನ್ನು ಹೊಸದಾಗಿ ಕಟ್ಟುವ ಕೆಲಸಮಾಡಿದೆ.

***"ಪುಣ್ಯವಂತರಿಗೆ ಡಾಲರ್ ಕಾಲನಿಯ ಮನೆ***
***ಪಾಪಿಗಳಿಗೆ ಮಸಣದಲ್ಲೂ ಇಲ್ಲ ಜಾಗ***
***ಪುಣ್ಯವಂತರ ಜೇಬಿಗೆ ಹರಿದು ಬರುತ್ತೆ***
***ಸರಕಾರಿ ಬೊಕ್ಕಸ, ಪಾಪಿಗಳಿಗೆ ಜೇಬಿಗೆ***
***ಸದಾ ಕತ್ತರಿ ಸರಕಾರದಿಂದ ಮತ್ತು ಕಸುಬುದಾರ ಕಳ್ಳರಿಂದ!***
***ಅದು ಹಾಗೆ ಇದು ಹೀಗೆ ಸಾಗಿ ಬಂದಿದೆ***
***ನಿಂದಿಸುವವರ ಬಾಯಿಗೆ ಹಂದಿಮಾಂಸ***
***ಮಿದುಳ ಅಡವಿಟ್ಟವರಿಗೆ ಪಂಚಭಕ್ಷ್ಯ***
***ಪರಮಾನ್ನ ಸರಕಾರಿ ಖರ್ಚಿನಲ್ಲಿ***
***ಹಸಿವು ಅವರಿಗೂ ಇದೆ ಇಬರಿಗೂ ಇದೆ***
***ಪುಣ್ಯವಂತರ ಹಸಿವೇ ಪರಮ ಶ್ರೇಷ್ಠ***
***ಉಳ್ಳವರ ಪದತಲಕ್ಕೆ ಸರಕಾರವೇ ಬಾಗುತ್ತೆ***
***ಬಡವರನ್ನು ಬಗ್ಗು ಬಡಿಯುತ್ತೆ***
***ಪುಣ್ಯವಂತರ ಸರಾಗ ಉಸಿರಾಟಕ್ಕೆ***
***ಬಡವರಿಂದ ತೆರಿಗೆ ವಸೂಲಿ ಮಾಡುತ್ತೆ***
***ಇದೇ ಇವರ ಘನತೆ!"*** (ಮುಳ್ಳೂರು ನಾಗರಾಜ್ ಸಮಗ್ರ ಸಾಹಿತ್ಯ ಸಂಪುಟ–2, ಪುಟ–106)

ಸರಕಾರ ಯಾವಾಗಲೂ ಉಳ್ಳವರ ಪರವಾಗಿರುತ್ತದೆ. ಆದರೆ ಸುಳ್ಳು ಭರವಸೆಗಳು ಮಾತ್ರ ಬಡವರ ಪಾಲಿಗೆ. ಇದು ವಾಸ್ತವ ಬದುಕಿನ ಸತ್ಯ. ಇದನ್ನೇ ದಲಿತ ಬಂಡಾಯ ಕಾವ್ಯ ಅಭಿವ್ಯಕ್ತಿಸಿದೆ. ಭಾರತದ ಸನಾತನವಾದವು ಪಾಪ, ಪುಣ್ಯಗಳ ಹೆಸರಿನಲ್ಲಿ ಕೆಳವರ್ಗವನ್ನು ಶೋಷಣೆ ಮಾಡಿಕೊಂಡು ಬಂದದೆ. 'ಪುಣ್ಯವಂತರಿಗೆ ಡಾಲರ್ ಕಾಲನಿಯಲ್ಲಿ ಮನೆ ಕಟ್ಟಿಸಿಕೊಡುತ್ತದೆ. ಪಾಪಿಗಳಿಗೆ ಮಸಣದಲ್ಲೂ ಜಾಗವಿಲ್ಲ.' ಈ ಮನೋಧೋರಣೆಯಲ್ಲಿ ಸರಕಾರಿ ಸೌಲಭ್ಯಗಳು ಹೇಗೆ ಉಳ್ಳವರ ಪರವಾಗಿರುತ್ತವೆ ಎಂಬುದನ್ನು ಕಾವ್ಯ ಸ್ಪಷ್ಟವಾಗಿ ಗುರುತಿಸಿದೆ. ಸರಕಾರಿ ಬೊಕ್ಕಸವು ಬಂಡವಾಳಶಾಹಿಗಳಿಗೆ ಉದಾರವಾಗಿ ದಕ್ಕುತ್ತದೆ. ಬಡವರನ್ನು ಬಡತನದಲ್ಲೇ ಇರುವಂತೆ ನೋಡಿಕೊಳ್ಳುವ ಕುತಂತ್ರವನ್ನು ಪ್ರಭುತ್ವ ಮಾಡುತ್ತದೆ. ಇದರ ಬಗ್ಗೆ ಚಕಾರ ಎತ್ತಿದವರನ್ನು ಹತ್ತಿಕ್ಕಲಾಗುತ್ತದೆ ಅಥವಾ ದಮನ ಮಾಡಲಾಗುತ್ತದೆ. ಸರ್ಕಾರದ ಪರವಾಗಿ ತಮ್ಮ ಮೆದುಳನ್ನು ಅಡವಿಟ್ಟು ಅದರ ವಕಾಲತ್ತು ವಹಿಸುವವರಿಗೆ ಒಂದಿಷ್ಟು ತುಪ್ಪ ಸವರುವ ವ್ಯವಸ್ಥೆಯನ್ನು ವಾಸ್ತವದಲ್ಲಿಯೂ ಕಾಣಬಹುದು.

ಬಂಡವಾಳಶಾಹಿಗಳ ಗುಲಾಮರಂತೆ ಕಾರ್ಯನಿರ್ವಹಿಸುವ ರಾಜಕಾರಣಿಗಳು ಬಡವರನ್ನು ನಿರಂತರವಾಗಿ ಶೋಷಣೆಗೆ ಗುರಿಪಡಿಸಿಕೊಂಡು ಬಂದಿದ್ದಾರೆ. ಬಂಡವಾಳಶಾಹಿಗಳಿಗೆ ಸರಾಗವಾಗಿ ವ್ಯವಹಾರ ಚಟುವಟಿಕೆಗೆ ಅವಕಾಶ ಮಾಡಿಕೊಡುವ ಪ್ರಭುತ್ವ ಬಡವರ ಜೇಬಿಗೆ ತೆರಿಗೆಯ ಕತ್ತರಿಹಾಕಿ ಮತ್ತಷ್ಟು ಆರ್ಥಿಕ ದುಸ್ಥಿತಿಗೆ ತಳ್ಳುವಂತೆ ಮಾಡುತ್ತದೆ. ಆದರೆ ರಾಜಕಾರಣಿಗಳು ತಮ್ಮ ಖಾಸಗಿ ಆಸ್ತಿ ಹಾಗೂ ಸಂಪತ್ತನ್ನು ದುಪ್ಪಟ್ಟು ಹೆಚ್ಚಿಕೊಳ್ಳುವ ರಾಜಕಾಣಿಗಳ ನಯವಂಚಕತನವನ್ನು ಕಾವ್ಯ ಬಯಲುಮಾಡಿದೆ. ಅಷ್ಟುಮಾತ್ರವಲ್ಲ ಬಡಜನರನ್ನು ಮತಯಂತ್ರಗಳಂತೆ ಬಳಸಿಕೊಳ್ಳುವ ವ್ಯವಸ್ಥೆಯನ್ನು ದಲಿತ ಬಂಡಾಯ ಕಾವ್ಯ ಮಾರ್ಮಿಕವಾಗಿ ಅಭಿವ್ಯಕ್ತಿಸಿದೆ.

***"ಶತಶತಮಾನ ಶೋಷಿತ ಜನಕೆ***
***ವಿದ್ಯಾವಂಚನೆ ಮಾಡಿದೆಯಲ್ಲ***
***ವೇದವನೋದಿದ ನಾಲಿಗೆ ಸೀಳಿ***
***ಕೇಳಿದ ಕಿವಿಗೆ ಸೀಸವ ಕಾಸಿ***
***ಘೋರ ನರಕಕೆ ತಳ್ಳಿದೆಯಲ್ಲ***
***ನ್ಯಾಯವೇ ತಾಯಿ ಹೇಳೆಂದೆ***
***ಚರಿತ್ರೆಯುದ್ದಕ್ಕೂ ಪ್ರಾಣಿಗಳಂತೆ***
***ಬಾಳಿದರೆನ್ನಯ ಪೂರ್ವಿಕರು***
***ನಿನ್ನಯ ಗುತ್ತಿಗೆ ಪಡೆದವರೊಂದಿಗೆ***
***ಬಾಳಿದೆ ನೀನು ತೊತ್ತಾಗಿ***
***ಅರಮನೆಯಲ್ಲಿ ಗುರುಮನೆಯಲ್ಲಿ***
***ನಿನ್ನಯ ಬೆಳಕು ಝಗಝಗಿಸಿತ್ತು***
***ಗುಡಿಸಲ ಕಡೆ ನೀನೋಡಲೇ ಇಲ್ಲ***
***ಅದು ಕಗ್ಗತ್ತಲ ಗೂಡಾಗಿತ್ತು"***

(ಸಿದ್ಧಲಿಂಗಯ್ಯ, ಊರು ಸಾಗರವಾಗಿ, ಪುಟ–19)

ಶೋಷಿತ ಸಮಾಜವನ್ನು ಶತಶತಮಾನಗಳಿಂದ ವಿದ್ಯಾವಂಚಿತರನ್ನಾಗಿ ಮಾಡಿ, ಅವರನ್ನು ನಿರಂತರವಾಗಿ ಶೋಷಣೆ ಮಾಡಿದೆ. ಈ ಅನ್ಯಾಯವನ್ನು ದಲಿತ ಬಂಡಾಯ ಕಾವ್ಯ ವಿದ್ಯಾದೇವತೆಯನ್ನು ಪ್ರಶ್ನಿಸಿದೆ. ಶೂದ್ರರು ವೇದವನ್ನು ಓದುವುದು ಮಾತ್ರವಲ್ಲ; ಓದುವುದನ್ನು ಕೇಳಿದರೂ ಕಾದ ಸೀಸವನ್ನು ಕಿವಿಗೆ ಹೊಯ್ದು, ಓದಿದವನ ನಾಲಿಗೆ ಸೀಳುವ ವಿಕೃತ ಸಮಾಜವನ್ನು ದಲಿತ ಬಂಡಾಯ ಕಾವ್ಯ ಅಭಿವ್ಯಕ್ತಿಸುವ ಮೂಲಕ ವಿರೋಧಿಸಿದೆ. ವಿದ್ಯೆ ಎನ್ನುವುದು ಕೇವಲ ಅರಮನೆ ಮತ್ತು ಗುರುಮನೆಗೆ(ಬ್ರಾಹ್ಮಣ ವರ್ಗಕ್ಕೆ) ಮಾತ್ರ ಸೀಮಿತಗೊಳಿಸಿ ಆ ಮೂಲಕ ಶೂದ್ರ ಸಮಾಜವನ್ನು ಹೀನಾಯವಾಗಿ ನಡೆಸಿಕೊಳ್ಳುವಂತೆ ಮಾಡಿದ ಪ್ರಭುತ್ವ ಮತ್ತು ಗುರುಪೀಠರೆನಿಸಿಕೊಂಡ ಬ್ರಾಹ್ಮಣ ವರ್ಗದ ವಿರುದ್ಧ ದಲಿತ ಬಂಡಾಯ ಕಾವ್ಯ ಧ್ವನಿ ಎತ್ತಿದೆ.

***“ಮರವು ನೆರಳ ನೀಡಲಿಲ್ಲ ತೊರೆಯು ನೀರ ನೀಡಲಿಲ್ಲ***
***ದೊರೆಯು ನ್ಯಾಯ ನೀಡಲಿಲ್ಲ ಮುಗಿಲು ಮಳೆಯ ಕರೆಯಲಿಲ್ಲ***
***ತಂಗಾಳಿಯು ಬೀಸಲಿಲ್ಲ ನೆಲವು ಹಸಿರ ಹಾಸಲಿಲ್ಲ***
***ಬೆಂಗಾಡಿನಲ್ಲಿ ನಡೆದು ನಾವು ಬಂಡೆಯಾದೆವು”*** (ಊರು ಸರಾಗವಾಗಿ, ಪುಟ–26)

ರಾಜ ನ್ಯಾಯ ಪರಿಪಾಲಕನಾಗಿರಬೇಕು. ಆಗ ಸಮಾಜ ಸ್ವಾಸ್ಥ್ಯವಾಗಿರುತ್ತದೆ. 'ಯತಾರಾಜ ತತಾ ಪ್ರಜೆ' ಎನ್ನುವಂತೆ ದೊರೆ ಅಸಮರ್ಥನು, ದುರಾಢಳಿತಗಾರನು ಆದಾಗ ಬಡಜನರಿಗೆ ನ್ಯಾಯ ಸಿಗುವುದಿಲ್ಲ. ಪ್ರಭುತ್ವವು ಯಾವಾಗಲು ಉಳ್ಳವರ ಪರವಾಗಿರುತ್ತದೆ. ಆದ್ದರಿಂದ ದಲಿತ ಬಂಡಾಯ ಕಾವ್ಯ ಪ್ರಭುತ್ವವನ್ನು ಪ್ರಶ್ನಿಸಿದೆ. ಪ್ರಭುತ್ವದ ಮಾತು ಹಾಗಿರಲಿ, ಸಮಾಜಿಕ ವ್ಯವಸ್ಥೆಯಲ್ಲಿ ಅಸ್ಪೃಶ್ಯರನ್ನು ಸಾರ್ವಜನಿಕ ಭಾವಿ, ಕಾಲುವೆ, ತೊರೆಯ ನೀರನ್ನು ಮುಟ್ಟದಿರುವಂತೆ ನಡೆಸಿಕೊಂಡು ಬಂದಿರುವುದು ಈ ಸಮಾಜದ ವಿಕೃತವೇ ಸರಿ. ದಲಿತರ ಪಾಲಿಗೆ ಪ್ರಕೃತಿ ಸಹಜವಾದ 'ಮರವು ನೆರಳ ನೀಡಲಿಲ್ಲ, ತಂಗಾಳಿ ಬೀಸಲಿಲ್ಲ,' ಎಂಬ ಕಾವ್ಯದ ಸಾಲುಗಳು ದಲಿತರ ಶೋಷಣೆಯ ತೀರ್ವತೆಯನ್ನು ಬಿಂಬಿಸುತ್ತದೆ. ಪ್ರಭುತ್ವ ಮತ್ತು ಸಮಾಜಿಕ ವ್ಯವಸ್ಥೆಗಳ ಮೃಗೀಯ ಮನಸ್ಥಿತಿಯನ್ನು ಎತ್ತಿಹಿಡಿದಿದೆ. ಹೀಗೆ ದಲಿತ ಬಂಡಾಯ ಕಾವ್ಯ ಸಮಾಜದ ಪ್ರತಿಬಿಂಬ ಪ್ರಭುತ್ವ, ಪ್ರಭುತ್ವದ ಪ್ರತಿಬಿಂಬ ಸಮಾಜ ಎಂಬುದನ್ನು ಸಾಭೀತುಪಡಿಸಿದೆ.

***“ಹಿಂದಿನ ಕವಿಗಳು ಬಣ್ಣನೆಗೈದರು***
***ರಾಜ ರಾಣಿಯರ ಲೋಲುಪತೆ***
***ಕಂಬನಿ ಸುರಿಸುವ ಬಡವರ ಬವಣೆಯ***
***ನೀ ಬರೆ ಎಂದಿತು ಆ ದನಿಯು***
***ಕಾಲು ಕೈಗಳಿಗೆ ಬಿಗಿದ ಸರಪಳಿಯ***
***ನರಳುವ ಬಡಬಂಧುವ ನೋಡು***
***ಮನೆಮಠವಿಲ್ಲದೆ ಗಂಗೆತ್ತಿನ ಜೊತೆ***
***ಸುತ್ತುವ ಅಲೆಮಾರಿಯ ನೋಡು”*** (ಸಿದ್ಧಲಿಂಗಯ್ಯ, ಊರು ಸಾಗರವಾಗಿ, ಪುಟ–97)

ದಲಿತ ಬಂಡಾಯ ಕಾವ್ಯದ ನಿಲುವು ಬಡವರ ಪರವಾಗಿದೆ, ಶೋಷಿತರ ಪರವಾಗಿದೆ ಎಂಬುದಕ್ಕೆ ಮೇಲಿನ ಪದ್ಯವೇ ಸಾಕ್ಷಿ. ಪ್ರಭುತ್ವದ ಪೋಷಣೆಯಲ್ಲಿ ಬದುಕಿದ ಕವಿಗಳ ಬರವಣಿಗೆ ಸಹಜವಾಗೇ ರಾಜ–ರಾಣಿಯರನ್ನು ಹೊಗಳಿ, ವೈಭವೀಕರಿಸಿ ಬರೆಯಬೇಕಾಗಿತ್ತು. ಪಂಪ ಹೇಳುವ ಹಾಗೆ 'ಜೋಳದ ಪಾಳಿಗಾಗಿ' ಎಂಬ ಮಾತು ಇಲ್ಲಿ ಪ್ರಸ್ತುತ ಎನಿಸುತ್ತದೆ. ಹಿಂದಿನ ಕವಿಗಳಿಗೆ ಶ್ರೀ ಸಾಮಾನ್ಯರ, ಬಡವರ ಬದುಕಿನ ಬವಣೆಗಳು ಅಷ್ಟೊಂದು ಮುಖ್ಯವೆನಿಸದೆ ತಮ್ಮ ಕಾವ್ಯದಲ್ಲಿ ಸ್ಥಾನ ಪಡೆಯಲಿಲ್ಲ. ಆದ್ದರಿಂದ ದಲಿತ ಬಂಡಾಯ ಕಾವ್ಯ ನಿರ್ಧಿಷ್ಟವಾಗಿ ಮತ್ತು ಸ್ಪಷ್ಟವಾಗಿ ಹೇಳುತ್ತಿದೆ. 'ಬಡವರ ಬವಣೆಗಳನ್ನ ನೀ ಬರೆ ಎಂದಿತು ಆ ದನಿಯು'. ಎನ್ನುವಲ್ಲಿ ಅದರ ನಿಲುವನ್ನು ಸ್ಪಷ್ಟಗೊಳಿಸಿಕೊಂಡಿದೆ. ಕಾವ್ಯ ಮುಂದುವರೆದು ಹೇಳುತ್ತದೆ. ಶ್ರೇಣೀಕೃತ ಸಮಾಜ ಕೆಳವರ್ಗವನ್ನು ಕೈ ಕಾಲುಗಳಿಗೆ ಸರಪಳಿ ಬಿಗಿದು ಮೃಗಗಳಂತೆ ನಡೆಸಿಕೊಂಡಿದೆ.

ಮನೆ–ಮಠಗಳಿಲ್ಲದೆ ಅಲೆಮಾರಿಯ ಹಾಗೆ ಸುತ್ತುವಂತೆ ಮಾಡಿರುವುದನ್ನು ನೋಡಿ ನಾಗರೀಕ ಸಮಾಜವು ತಲೆ ತಗ್ಗಿಸುವಂತೆ ದಲಿತ ಬಂಡಾಯ ಕಾವ್ಯ ಪ್ರಶ್ನಿಸಿದೆ.

***"ಅಂಗನೇರ ಸಂಗದಲ್ಲಿ ಶೃಂಗಾರದ ರಂಗಿನಲ್ಲಿ***
***ರಾಜ ರಮಿಸುತ್ತಿದ್ದನು***
***ಜೂಜಿನಲ್ಲಿ ಮೋಜಿನಲ್ಲಿ ಗಾನಪಾನ ಗೋಷ್ಠಿಯಲ್ಲಿ***
***ಮುಳುಗಿ ನಲಿಯುತ್ತಿದ್ದನು.***
***ರಾಜನ ಕೂಟ ಬಲವಾಗಿ***
***ಕೂಟದ ಆಟ ಅತಿಯಾಗಿ***
***ಜನರ ಸುಲಿಯುತ್ತಿದ್ದನು***
***ಸೂತ್ರಧಾರ ಅವನಾಗಿ"*** (ಸಿದ್ಧಲಿಂಗಯ್ಯ, ಊರು ಸಾಗರವಾಗಿ, ಪುಟ–103)

ದಲಿತ ಬಂಡಾಯ ಕಾವ್ಯ ಪ್ರಭುತ್ವದ ಲೋಲುಪತೆ ಮತ್ತು ವಿಲಾಸಿ ಬದುಕಿನ ಅಟ್ಟಹಾಸವನ್ನು ಪ್ರಶ್ನಿಸಿದೆ. ರಾಜ ಜನಪರವಾಗಿದ್ದಾಗ ರಾಜ್ಯ ಸುಖವಾಗಿರುತ್ತದೆ. ಪ್ರಜೆಗಳು ಕ್ಷೇಮದಿಂದ ಇರುವರು. ಆದರೆ ರಾಜನು ವಿಲಾಸಿ ಬದುಕಿನಲ್ಲಿ ಮುಳುಗಿ ಮೋಜು–ಮಸ್ತಿಯಲ್ಲಿ, ಅಂಗನೇಯರ ಶೃಂಗಾರದಲ್ಲಿ, ಗಾನ, ಮಧ್ಯಪಾನದಲ್ಲಿ, ಜೂಜಿನಲ್ಲಿ ಇಂತಹ ದುಂದುಗಾರಿಕೆಯ ಅಥವಾ ಮೋಜಿನ ಜೀವನದಿಂದ ರಾಜ್ಯದ ಬೊಕ್ಕಸ ಖಾಲಿಯಾದಾಗ ಜನಸಾಮಾನ್ಯರನ್ನು ಸುಲಿಗೆ ಮಾಡುವ ಪ್ರಭುತ್ವ ವಿರೋಧಿ ನಿಲುವನ್ನು ದಲಿತ ಬಂಡಾಯ ಕಾವ್ಯ ಪ್ರತಿಭಟಿಸಿದೆ ಮತ್ತು ಪ್ರಭುತ್ವದ ವಿಲಾಸಿ ಜೀವನ ಜನರ ಶ್ರಮ ಮತ್ತು ಅವರ ಹಣದಿಂದಲೇ ಎಂಬುದನ್ನು ದಲಿತ ಬಂಡಾಯ ಕಾವ್ಯವು ಗುರುತಿಸಿದೆ.

***"ಹೊಳೆಯ ನೀರಿನಲ್ಲಿ ಆವಿ ಮೇಲೇರಿ ಕಾವು***
***ಅರಮನೆಯ ಅರವಂಟಿಗೆಗೆ ಹರಿದರೆ***
***ಬೀದಿಬದಿ ಹನಿಹನಿಗೆ ಬಾಯ್ದೆರೆದ ಜನ***
***ನಲ್ಲಿಗಳ ಮುಂದೆ ಗಲ್ಲಗಳೊಡೆದು***
***ನಲ್ಲೆಯರ ಬಳೆ ಚೂರು ಚೂರಾಗಿ***
***ಕಂದಮ್ಮಗಳ ದಾಹತೀರದೆ ದೂರನೋಟ***
***ದೇಹದೊಳಗಿನ ನೀರು ಬತ್ತಿ, ತಾಯಿ***
***ಮೊಲೆಗಳ ಹಾಲು ಹಿಂಗಿದ ಹಾಹಾಕಾರದಿ***
***ಊರಮುಂದಿನ ಗುಡಿಮುಂದೆ ಬಿಡಾರ***
***ತಂಬೂರಿ ಹಿಡಿದ ಅಪರಿಚಿತ ಸಂತನ***
***ಪಾದವಿಲ್ಲದ ಕಾಲು ನೆತ್ತರೊತ್ತಿದ ನಡಿಗೆ***

***ತುತ್ತು ನೀಡೇ ತಾಯಿ ಇಪ್ಪತ್ತು ದಿನವಾಯ್ತು***

***ಒಪ್ಪತ್ತಿನೂಟಕ್ಕೆ ಕಪ್ಪವನು ಕೊಟ್ಟೇನು***

***ಗುಟ್ಟೆ ಗಣೆಯಾಗಿ ಘಟ್ಟ ಬಯಲಾಗೆ***

***ಕಾಡೆಂಬ ನಾಡಿಗೆ ನೀರು ಬರುವುದು ಎಂತು" (ಎಲ್. ಹನುಮಂತಯ್ಯ, ಸ.ಸಾ.ಸಂ–1, ಪುಟ–154)***

ಮೇಲಿನ ಕಾವ್ಯವು ಬರಗಾಲದ ತೀರ್ವತೆಯನ್ನು ಹೇಳುತ್ತಿದೆ. ಈ ಬರಗಾಲದ ಬಿಸಿ ಸಾಮಾನ್ಯ ಪ್ರಜೆಗಳಿಗೆ ಮಾತ್ರ ತಟ್ಟಿದೆ. ಅದು ಅರಮನೆಯ ಅಂಗಳಕ್ಕೂ ತಾಗದು. ಇಡೀ ಹೊಳೆಯ ನೀರೆ ಆವಿಯಾಗಿ ಅರಮನೆಯ ಅರವಂಟಿಗೆ ತುಂಬಿದೆ. ಬೀದಿ ಬೀದಿಯಲ್ಲಿ ಜನರು ನೀರಿಗಾಗಿ ಆಹಾಕಾರ ಪಡುವಂತಾಗಿದೆ. ಈ ಕಾವ್ಯದಲ್ಲಿ ಬಳಕೆಯಾಗಿರುವ ನೀರು ಒಂದು ಸಂಕೇತ. ಅದು ಮನುಷ್ಯರ ಜೀವಜಲ. ಮನುಷ್ಯನಿಗೆ ಗಾಳಿಯ ನಂತರ ಅನಿವಾರ್ಯವಾದ ಮತ್ತೊಂದು ಸಂಗತಿ ಎಂದರೆ ನೀರು. ಇದನ್ನೇ ಕವಿ ಬರಗಾಲದ ತೀರ್ವತೆಯ ಸಂಕೇತವಾಗಿ ಬಳಸಿದ್ದಾನೆ. ಅದಕ್ಕಾಗಿ ಜನರು ಗೋಳಿಡುತ್ತಿದ್ದಾರೆ. ಅಷ್ಟುಮಾತ್ರವಲ್ಲ, ನಲ್ಲಿಗಳ ಮುಂದೆ ಗಲ್ಲಗಳನ್ನು ಒಡೆದುಕೊಳ್ಳುವ ಮತ್ತು ನಲ್ಲೆಯರ ಕೈಬಳೆ ಚೂರುಚೂರಾಗುವ ಚಿತ್ರಣವು ಜನರ ದಾಹದ ತೀರ್ವತೆಯಿಂದ ಒಡೆದಾಡುವ ಸ್ಥಿತಿಯನ್ನು ಕಾವ್ಯ ನಿರೂಪಿಸಿದೆ. ಅಪರಿಚಿತನೊಬ್ಬ 'ತುತ್ತು ನೀಡೆ ತಾಯಿ ಇಪ್ಪತ್ತು ದಿನವಾಯ್ತು ಒಪ್ಪತ್ತಿನೂಟಕ್ಕೆ ಕಪ್ಪವನು ಕೊಟ್ಟೇನು' ಎನ್ನುವಲ್ಲಿ ಬರಗಾಲದ ತೀರ್ವತೆಯನ್ನು ಕಾವ್ಯವು ವಿಷಾದದಿಂದ ಅಭಿವ್ಯಕ್ತಿಸಿದೆ. ಇಲ್ಲಿ ಗಮನಿಸಬೇಕಾದ ಸಂಗತಿ ಎಂದರೆ ಇಡೀ ರಾಜ್ಯದ ಜನರು ತುತ್ತು ಅನ್ನಕ್ಕಾಗಿ ಹಾಗೂ ತೊಟ್ಟು ನೀರಿಗಾಗಿ ಹೊಡೆದಾಡಿಕೊಳ್ಳುವಷ್ಟು ಕಷ್ಟದ ಸ್ಥಿತಿಯಲ್ಲಿರುವಾಗ ಅರಮನೆಗೆ ಬರಗಾಲದ ಬಿಸಿಯುಸಿರು ತಾಗದು. ಆದರೆ ಜನರ ಗೋಳು, ಹಸಿವಿನ ತೀರ್ವತೆ, ಬರಗಾಲದ ಭೀಕರತೆ ಜನಸಾಮಾನ್ಯರಿಗೆ ಮಾತ್ರ ತಟ್ಟಿದೆ. ಇದನ್ನ ದಲಿತ ಬಂಡಾಯ ಕಾವ್ಯ ವಿಷಾದದ ನೆಲೆಯಲ್ಲಿ ಪ್ರಭುತ್ವದ ಕ್ರೂರತೆಯನ್ನು ಅಭಿವ್ಯಕ್ತಿಸಿದೆ.

***"ನೀವಿರುವ ಅರಮನೆಯ ಜಂತೆ ಜಂತೆಯೂ ನಾನು***

***ಉರಿವ ಬೆಳಕಿನ ಬಳ್ಳಿ ನನ್ನ ನರಗಳು ನಾನೆ***

***ನಿಮ್ಮಜ್ಜ ಅವರಜ್ಜ ಆಳಿದರಮನೆ ತುಂಬ***

***ಆಳು ಮಕ್ಕಳು ನೂರು ನಾವು ನಿಮ್ಮೊಳಗೆ"*** (ಎಲ್. ಹನುಮಂತಯ್ಯ, ಸ.ಸಾ.ಸಂ–1 ಪುಟ–274)

ದಲಿತ ಬಂಡಾಯ ಕಾವ್ಯ ಸ್ಥಾಪಿತ ನಂಬಿಕೆಗಳನ್ನು ಭಗ್ನಗೊಳಿಸಿದೆ. ಪ್ರಭುತ್ವ ಜನರನ್ನು ಪೋಷಿಸುತ್ತದೆ. ಜನರಿಗೆ ರಕ್ಷಣೆ ಒದಗಿಸುತ್ತದೆ. ಜನರನ್ನು ಸಲಹುತ್ತದೆ ಎಂಬ ನಂಬಿಕೆಗಳನ್ನು ಕಾವ್ಯವು ಸುಳ್ಳು ಎಂದು ನಿರೂಪಿಸಿದೆ. 'ನೀವಿರುವ ಅರಮನೆಯ ಜಂತೆಯು ನಾನು' ಎಂದು ಹೇಳುವಾಗ, ನನ್ನಿಂದಲೇ ಅರಮನೆ ನಿಂತಿರುವುದು ಎಂದಾಗುತ್ತದೆ. 'ಅರಮನೆಯ ಒಳಗೆ ಉರಿವ ಬೆಳ್ಳಿ ಬೆಳಕು ನನ್ನ ನರಗಳು.' ಎಂದು ಹೇಳುವಲ್ಲಿ ಪ್ರಜೆಗಳ ಶ್ರಮದ ಬೆವರಿನ ಫಲವಾಗಿ ಅರಮನೆ ಬೆಳಗಿದೆ ಎಂದು ಸ್ಪಷ್ಟವಾಗಿ ಹೇಳಿದೆ. ಮುಂದುವರೆದು ಕಾವ್ಯ 'ನಿಮ್ಮಜ್ಜ, ಅವರಜ್ಜ, ಆಳಿದರಮನೆಯ ತುಂಬ ಆಳುಮಕ್ಕಳಾಗಿ ದುಡಿದ ನೂರನೆ ಸಂತತಿಯವರಾದ ನಾವು ನಿಮ್ಮೊಳಗೆ' ಎಂದು ಹೇಳುತ್ತದೆ. ಒಟ್ಟಾರೆ ಪ್ರಭುತ್ವ ಅಥವಾ ಅರಮನೆಯು ರಾಜರಿಂದಲೇ ಜನರ ಪಾಲನೆ, ಪೋಷಣೆ ಎಂಬ ಸ್ಥಾಪಿತ ಪೊಳ್ಳು ನಂಬಿಕೆಯನ್ನು ಭಗ್ನಮಾಡಿದೆ. ಆ

ಮೂಲಕ ಅರಮನೆಯ ಅಸ್ಥಿತ್ವದ ನಿಜ ವಾರಸುದಾರರು, ಪೋಷಕರು ನಾವೆ (ಜನಸಾಮಾನ್ಯರು) ಎಂದು ಘೋಷಿಸಿಕೊಂಡಿದೆ.

***"ಬೇವು ಬಿತ್ತುವ ಜನಕೆ ಬೆಲ್ಲದರಮನೆಯುಂಟು***

***ಬೆಲ್ಲ ಬೆಳೆಯುವ ಜನಕೆ ಅರಮನೆಯ ಕಹಿಯುಂಟು***

***ಅರಮನೆ ತುಂಬಿರುವ ಹಸುಳೆ ಕಂದಮ್ಮಗಳು***

***ಬೆದರಿ ನಿಂತಿವೆ ನೋಡಿ ಚಕ್ರವ್ಯೂಹದ ಬಲೆಯ***

***ಬಲೆಯ ಸೀಳುವ ಕಲಿಯು ಅಭಿಮನ್ಯು ತಾ ಒಂಟಿ***

***ಬಲೆಯ ನೇಯುವ ನೂರು ದ್ರೋಣರರಮನೆಯೊಳಗೆ***

***ವಿದ್ಯೆ ಕಲಿಯುವ ತವಕ ಕೋಟೆ ಕಣ್ಣುಗಳಲಿ*** (ಎಲ್. ಹನುಮಂತಯ್ಯ, ಸ.ಸಾ.ಸಂ–1 ಪುಟ–283)

ಪ್ರಭುತ್ವ ಯಾವಾಗಲು ಕುತಂತ್ರಗಳಿಂದ ತನ್ನ ಅಧಿಕಾರದ ಚುಕ್ಕಾಣಿಯನ್ನು ಭದ್ರ ಪಡಿಸಿಕೊಳ್ಳುತ್ತಿರುತ್ತದೆ. ದುಡಿಯುವ ಮನಸ್ಸಿನ ಒಳಗೆ ಬೆಲ್ಲದ ಸವಿಯುಂಟು ಎಂಬ ಮಾತಿನಂತೆ 'ಬೇವು ಬಿತ್ತುವ ಜನರಿಗೆ ವೈಭವದ ಅರಮನೆಯುಂಟು. ಬೆಲ್ಲ ಬೆಳೆಯುವ ಜನಕೆ ಅರಮನೆಯ ಕಹಿಯುಂಟು' ಎಂದು ಹೇಳುವ ಕಾವ್ಯ, ಅರಮನೆಯು ಪ್ರಭುತ್ವದ ಸಂಕೇತ. ಅದು ನಿರಂತರವಾಗಿ ವಿಷದ ಬೀಜವನ್ನು ಬಿತ್ತಿ ಸಮಾಜದಲ್ಲಿ ಒಡಕನ್ನುಂಟುಮಾಡಿ ತನ್ನ ಸ್ಥಾನವನ್ನು ನಿರಂತರವಾಗಿ ಕಾಯ್ದುಕೊಳ್ಳುತ್ತದೆ. ಅರಮನೆಯ ವಿರುದ್ಧ ಹೋರಾಡುವರು ಒಂಟಿ ಅಭಿಮನ್ಯುವಿನಂತೆ ಅಸಹಾಯಕರು. ಅರಮನೆಯ ಪರವಾಗಿ ನಿಲ್ಲುವ, ಮೋಸದ ಚಕ್ರವ್ಯೂಹವನ್ನೇ ರಚಿಸುವ ದ್ರೋಣರಂತವರು ನೂರಾರು ಜನರ ಬೆಂಬಲವಿದೆ. ಅಂತಹ ಶಕ್ತಿ ಸಮುದಾಯದ ಮುಂದೆ ಅಸಹಾಯಕರ, ಬಡವರ, ಹೋರಾಟ ನಿರರ್ಥಕವಾಗುತ್ತವೆ. ಕೇವಲ ಗಾಳಿಯ ಜೊತೆ ಗುದ್ದಾಡಿದಂತೆ. ಹೀಗೆ ಅರಮನೆಯ ಪರವಾದ ವ್ಯೂಹ ರಚಿಸುವ ದ್ರೋಣಚಾರ್ಯರಂತವರು ಇರುವವರೆಗೂ ಪ್ರಭುತ್ವದ ವಿರುದ್ಧ ಎದೆಯೊಡ್ಡಿ ನಿಲ್ಲುವುದು ಕಷ್ಟದ ಕೆಲಸ ಎಂಬುದನ್ನು ದಲಿತ ಬಂಡಾಯ ಕಾವ್ಯ ತನ್ನ ಅಸಹಾಯಕತೆಯನ್ನು ವಿಷಾದವಾಗಿ ಹೇಳುತ್ತಿದೆ.

***"ಈ ಕತ್ತಲು ನಾಳಿನ ಸೂರ್ಯೋದಯದ ಪ್ರಮಾಣ ಮಾಡಲಿ***
***ಕ್ರಿ.ಶ.2047ರ ಹೊತ್ತಿಗೆ***
***ಈ ಪ್ರಜಾರಾಜ್ಯ, ಸ್ಥಿರವಾಗಿ, ಸುಂದರವಾಗಿ, ಸಂಪನ್ನವಾಗಿ,***
***ಸುರಕ್ಷಿತವಾಗಿ***
***ಉಳಿಯಬೇಕೆಂದು ನನ್ನ ಕನಸುಕಾಣಲು ಬಿಡಿ.***
***ಅಲ್ಲಿಯ ತನಕ ನಾವಿದ್ದರೂ ಇಲ್ಲದಿದ್ದರೂ ನನ್ನ ಈ ಕನಸು***
***ನನಸಾಗಲೆಂದು ಕನಸು ಕಾಣಲು ಬಿಡಿ"*** (ಎಲ್. ಹನುಮಂತಯ್ಯ, ಸ.ಸಾ.ಸಂ–1 ಪುಟ–219)

ದಲಿತ ಕಾವ್ಯವು ಇಲ್ಲಿ ಕನಸು ಕಾಣಲು ಬಿಡಿ ಎಂದು ವಿನಂತಿಸಿಕೊಳ್ಳುತ್ತಿದೆ. ಏಕೆಂದರೆ, ಕ್ರಿ.ಶ.2047ರ ಹೊತ್ತಿಗೆ ಆದರೂ ಈ ಪ್ರಜಾಪ್ರಭುತ್ವ ಸಂವಿಧಾನದ ಆಶಯಗಳಿಗೆ ಬದ್ಧವಾಗಿ, ಸ್ಥಿರವಾಗಿ, ಸುಂದರವಾಗಿ,

ಸಂಪನ್ನವಾಗಿ, ಸುರಕ್ಷಿತವಾಗಿ ಉಳಿಯಬೇಕೆಂದು ಕನಸು ಕಾಣಲು ಬಿಡಿ ಎಂದು ವಿನಂತಿಸುತ್ತಿದೆ. ಕನಸು ಬೀಳುವುದು ಯಾವಾಗ ಎಂದರೆ ಮನೋವೈಜ್ಞಾನಿಕವಾಗಿ ವಾಸ್ತವದಲ್ಲಿ ಹೀಡೇರಿಸಿಕೊಳ್ಳಲಾಗದ ಅತೃಪ್ತ ಆಸೆಗಳು, ಬಯಕೆಗಳು ಕನಸಲ್ಲಿ ಕಾಣುತ್ತೇವೆ. ದಲಿತ ಕಾವ್ಯವೂ ಕೂಡ ಇಂತಹ ವಾಸ್ತವದಲ್ಲಿ ಹೀಡೇರದ ಪ್ರಜಾಪ್ರಭುತ್ವದ ಮೌಲ್ಯಗಳು ಕವಿಗೆ ಕನಸಿನಲ್ಲಾದರೂ ತೃಪ್ತಿಪಡುವಂತಾಗಲಿ ಎಂಬ ಅದಮ್ಯ ಆಸೆಯಾಗಿದೆ. 2047ಕ್ಕೆ ಸ್ವಾತಂತ್ರ್ಯ ಪಡೆದು ಶತಮಾನವಾಗುವುದು ಆದರೆ ಸ್ವತಂತ್ರವೇನೋ ಪಡೆದೆವು, ಆದರೆ ಪ್ರಜಾಪ್ರಭುತ್ವದ ಆಶಯವಾಗಲಿ, ಅದರ ಮೌಲ್ಯಗಳಾಗಲಿ ಇನ್ನೂ ಈಡೇರದೇ ಇರುವುದು ಕವಿಯನ್ನು ವಿಚಲಿತಗೊಳಿಸಿದೆ. ಅದರಿಂದ ಕವಿ ಪ್ರಜಾಭುತ್ವದ ಅತೃಪ್ತ ಆಶಯಗಳನ್ನು ಕನಸಿನಲ್ಲಾದರೂ ಈಡೇರಿಸಿಕೊಳ್ಳಲು ಬಿಡಿ ಎಂದು ವಿಷಾದದಿಂದ ಬೇಡಿಕೊಳ್ಳುತ್ತಿದೆ. ಅಂತಹ ಕನಸನ್ನೇ ಕಾಣದಂತೆ ಮಾಡಿರುವ ಪ್ರಜಾಪ್ರಭುತ್ವ ವಿರೋಧಿ ಮನಸ್ಸುಗಳ ಕ್ರೂರತೆಯನ್ನು ಕಾವ್ಯ ಮಾರ್ಮಿಕವಾಗಿ ಅಭಿವ್ಯಕ್ತಿಸಿದೆ.

***"ನೀವು***
***ಮತಗಟ್ಟೆಯ ನಾಣ್ಯಗಳು***
***ಎಣಿಕೆಗೆ ದಕ್ಕುವಷ್ಟು***
***ಗುರುತುಗಳು***
***ಸಮಗ್ರವಾಗಿ***
***ಹೇಳಬೇಕೆಂದರೆ***
***'ಇಷ್ಟೆ'***
***ಹೇಳಬೇಕೆಂದರೆ***
***ಪ್ರಜಾಪ್ರಭುತ್ವ***
***ನಿಮಗಿತ್ತ ಬೆಲೆ(ಕೊಡುಗೆ)"*** (ಮೂಡ್ನಾಕೂಡ ಚಿನ್ನಸ್ವಾಮಿ, ಸಮಗ್ರ ಸಂಪುಟ–1, ಪುಟ–43)

ಬಹುಸಂಖ್ಯಾತ ಕೆಳವರ್ಗದ ಜನರು ಅಧಿಕಾರದ ಚುಕ್ಕಾಣಿ ಹಿಡಿಯಬಹುದಾದ ಸಾಮರ್ಥ್ಯವಿದೆ. ಆದರೆ ಅವರೆಲ್ಲರನ್ನು ಓಟ್ ಬ್ಯಾಂಕ್‌ಗಳಾಗಿ ಮಾಡಿಕೊಂಡು ಚುನಾವಣೆಯಲ್ಲಿ ಅವರನ್ನು ಹಣ, ಹೆಂಡದಿಂದ ಕೊಂಡುಕೊಂಡು ಓಟಿನ ಎಣಿಕೆಗೆ ದಕ್ಕುವ ಗುರುತುಗಳಾಗಿದ್ದಾರೆ. ಬಹುಸಂಖ್ಯಾತರನ್ನು ಒಡೆಯುವ ಚಾಕಚಕ್ಯತೆ ಮೇಲ್ವರ್ಗದವರಿಗೆ ಸಿದ್ಧಿಸಿದೆ. ಓಟು ನೀಡಿ ಇಂಗುತಿಂದ ಮಂಗನಂತೆ ಆಗಿರುವ ಜನಸಮುದಾಯವನ್ನು ದಲಿತ ಬಂಡಾಯ ಕಾವ್ಯ ಅತ್ಯಂತ ಕಟುವಾಗಿ ಟೀಕಿಸಿದೆ. ಆ ಮೂಲಕ ಬಹುಸಂಖ್ಯಾತ ಜನವರ್ಗವನ್ನು ಎಚ್ಚರಿಸಿದೆ.

***"ಸ್ವಾತಂತ್ರ್ಯದ ಕನಿಷ್ಟ ಸೌಲಭ್ಯಗಳು***
***ನಮ್ಮವರಿಗೂ ಬರುವ ತನಕ***
***ಸೋರಿ ಹೋಗುತ್ತವೆ ಮಗು***
***ಪ್ರಭುತ್ವದ ಕನಸೇಕೆ ಮಲಗು ಎಂದ.***
***ಪ್ರಜಾಪ್ರಭುತ್ವದ ಅವಶೇಷಗಳಡಿಯಲ್ಲಿ***

*ಸಿಕ್ಕಿ ನಜ್ಜು ಗುಜ್ಜಾಗಿರುವ ಅಜ್ಜನ*
*ಪಳೆಯುಳಿಕೆಗಳು*
*ನಾವು ಚುನಾವಣೆಗೆಂದೇ ಇರುವ*
*ಚಲಾವಣೆಯ ನಾಣ್ಯಗಳೇ?"* (ಮೂಡ್ನಾಕೂಡ ಚಿನ್ನಸ್ವಾಮಿ, ಸಮಗ್ರ ಸಂಪುಟ–1, ಪುಟ–139)

ಸರ್ಕಾದ ಸೌಲಭ್ಯಗಳು ಶ್ರೇಣೀಕೃತ ಸಮಾಜದ ಕಟ್ಟಕಡೆಯ ಪ್ರಜೆಗೂ ತಲುಪುವಂತಾದಾಗ ಮಾತ್ರ ಸ್ವಾತಂತ್ರ್ಯದ ಪದಕ್ಕೆ ಅರ್ಥಬರುತ್ತದೆ. ಆದರೆ ಈ ಕೆಲಸ ಆಗುತ್ತಿಲ್ಲ. ತಾತನು ತನ್ನ ಮೊಮ್ಮಗನಿಗೆ ನಿರೂಪಿಸುವ ದಾಟಿಯಲ್ಲಿ ರಚನೆಯಾಗಿರುವ ಈ ಕಾವ್ಯವು ಸರ್ಕಾರಿ ಸೌಲಭ್ಯಗಳು ಜನಸಾಮನ್ಯರಿಗೆ ತಲುಪುವಷ್ಟರಲ್ಲಿ ಸೋರಿ ಹೋಗುತ್ತವೆ. ಎಂಬ ಮಾತಿನಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆಯ ಭ್ರಷ್ಟಾಚಾರವನ್ನು ಎತ್ತಿಹಿಡಿಯುತ್ತದೆ. ಪ್ರಭುತ್ವದ ಕನಸೇಕೆ ಮಲಗು ಮಗು, ಎಂದು ಹೇಳುವಾಗ ಅಸಹಾಯಕತೆ ಮತ್ತು ಪ್ರಜಾಪ್ರಭುತ್ವದ ಬಗೆಗಿನ ತಿರಸ್ಕಾರದ ಭಾವ ಮೂಡಿಸುತ್ತದೆ. ಪ್ರಜಾಪ್ರಭುತ್ವದ ಬಗೆಗೆ ಮೌನ ಪ್ರತಿರೋಧವು ಇಲ್ಲಿ ಅಭಿವ್ಯಕ್ತಿಯಾಗಿದೆ. ದಲಿತ ಬಂಡಾಯ ಕಾವ್ಯ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿಯೂ ಜನರು ನಲುಗಿ ಹೋಗಿದ್ದಾರೆ. ಇದನ್ನು ಪ್ರಜಾಪ್ರಭುತ್ವದ ಅವಶೇಷಗಳಡಿಯಲ್ಲಿ ಸಿಕ್ಕಿ ನುಜ್ಜುಗುಜ್ಜಾಗಿರುವ ಅಜ್ಜನ ಪಳೆಯುಳಿಕೆಗಳು ನಾವು ಎಂಬಲ್ಲಿ ನಿಜವಾದ ಪ್ರಜಾಪ್ರಭುತ್ವ ಅಥವಾ ಅಂಬೇಡ್ಕರ್ ಬಯಸಿದ ಪ್ರಜಾಪ್ರಭುತ್ವ ಇಂದು ನಿಜವಾಗಿಯೂ ಜಾರಿಯಾಗಿದೆಯೇ ಎಂಬುದರ ಬಗ್ಗೆ ದಲಿತ ಬಂಡಾಯ ಕಾವ್ಯಕ್ಕೆ ಅನುಮಾನವಿದೆ. ಆದ್ದರಿಂದ ಕಾವ್ಯ ಅತ್ಯಂತ ಮಾರ್ಮಿಕವಾಗಿ "ನಾವು ಚುನಾವಣೆಗೆಂದೇ ಇರುವ ಚಲಾವಣೆಯ ನಾಣ್ಯಗಳೇ?" ಎಂದು ಪ್ರಶ್ನಿಸಿದೆ. ಇದಕ್ಕೆ ಉತ್ತರವನ್ನು ನಾವೇ ಕಂಡುಕೊಳ್ಳಬೇಕಾದ ಅನಿವಾರ್ಯತೆ ಇದೆ ಎಂಬ ಪ್ರಶ್ನೆಯನ್ನು ಮುಂದಿಟ್ಟಿದೆ.

*"ಪ್ರಜಾಪ್ರಭುತ್ವದ ಉತ್ತರಕುಮಾರರಿಗೆ*
*ಬಿಲ್ಲು ಹಿಡಿಸಬಲ್ಲದು ನಿಮ್ಮ*
*ಮನೆಯ ನಾಯಿ, ಬೇಡ.*
*ಬೃಹನ್ನಳೆಯರಿಲ್ಲವೆ ಆಚೀಚೆ ಹಿಂಬದಿಯಲ್ಲಿ*
*ಬಂಡವಾಶಾಹಿ ಬಿಗಿ ಬಂಧನದಲ್ಲಿ"* (ಮೂಡ್ನಾಕೂಡ ಚಿನ್ನಸ್ವಾಮಿ, ಸಮಗ್ರ ಸಂಪುಟ–1, ಪುಟ–218)

ದಲಿತ ಬಂಡಾಯ ಕಾವ್ಯ ಪ್ರಜಾಪ್ರಭುತ್ವ ವ್ಯವಸ್ಥೆ ನಿಜವಾಗಿಯು ಯಾರ ಕೈಯಲ್ಲಿದೆ. ಎಂಬುದನ್ನು ಸ್ಪಷ್ಟವಾಗಿ ಗುರುತಿಸಿದೆ. ಉತ್ತರಕುಮಾರನಂತ ನಮ್ಮನ್ನಾಳುವವರನ್ನು ಬಂಡವಾಶಾಹಿಗಳು ಆಳಲ್ಪಡುತ್ತಿದ್ದಾರೆ. ಇದು ವಾಸ್ತವ ಸತ್ಯ. ದಲಿತ ಬಂಡಾಯ ಕಾವ್ಯ ಇದನ್ನು ಸರಿಯಾಗಿ ಗುರುತಿಸಿದೆ. ನಾವು ಚುನಾವಣೆಯಲ್ಲಿ ಆರಿಸಿ ಕಳಿಸುವ ನಾಯಕರು ನಮ್ಮನ್ನು ಆಳುತ್ತಾರೆ ಎಂಬ ಭ್ರಮೆಯಲ್ಲಿ ಬದುಕುತ್ತಿದ್ದೇವೆ. ಆದರೆ ಜನನಾಯಕರು ನಮ್ಮ ಓಟುಗಳನ್ನು ಕೊಂಡುಕೊಂಡು ಅಧಿಕಾರದ ಚುಕ್ಕಾಣಿ ಹಿಡಿದರೆ ಆ ಜನನಾಯಕರನ್ನೇ ಕೊಂಡುಕೊಳ್ಳುವ ಇನ್ನೊಂದು ಜನವರ್ಗವಿದೆ ಅದೇ ಬಂಡವಾಳಶಾಹಿ ವರ್ಗ. ಪ್ರಜಾಪ್ರಭುತ್ವದ ನಾಯಕರು ಅವರು ಹೇಳಿದಂತೆ ಕಾನೂನುಗಳನ್ನು ಮಾಡಿ ಅವರ ಗುಲಾಮರಂತೆ ವರ್ತಿಸುವ ವಾಸ್ತವ ರಾಜಕಾರಣದ ಪ್ರತಿಬಿಂಬವೋ ಎಂಬಂತೆ ದಲಿತ ಬಂಡಾಯ ಕಾವ್ಯ ಮಾರ್ಮಿಕವಾಗಿ ಪ್ರಭುತ್ವವನ್ನು ಟೀಕಿಸಿದೆ.

ಹೀಗೆ ದಲಿತ ಬಂಡಾಯ ಕಾವ್ಯ ಪ್ರಜಾಪ್ರಭುತ್ವದ ಗೋಮುಖ ವ್ಯಾಘ್ರತನವನ್ನು ಬಯಲಿಗೆಳೆದಿದೆ. ಪ್ರಜಾಪ್ರಭುತ್ವ ವ್ಯವಸ್ಥೆಯು ಹೇಗೆ ಕಲುಶಿತಗೊಂಡಿದೆ ಎಂಬುದನ್ನು ಸ್ಪಷ್ಟವಾಗಿ ಗುರುತಿಸಿದೆ. ಮನುಷ್ಯನ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ಹೇಗೆ ಹತ್ತಿಕ್ಕಲಾಗುತ್ತಿದೆ ಎಂಬುದನ್ನು ಈ ಕಾವ್ಯವು ಅತ್ಯಂತ ಸೂಕ್ಷ್ಮವಾಗಿ ಕಟ್ಟಿಕೊಟ್ಟಿದೆ. ದಲಿತ ಬಂಡಾಯ ಕಾವ್ಯದ ಉದ್ದೇಶ ಪ್ರಭುತ್ವವನ್ನು ದೂರುವುದು ಮಾತ್ರವಲ್ಲ ಪ್ರಭುತ್ವವು ಹೊಂದಿರಬೇಕಾದ ಅಥವಾ ಪಾಲಿಸಬೇಕಾದ ಕೆಲವು ಕನಿಷ್ಟ ಮೌಲ್ಯಗಳ ಬಗ್ಗೆ ಎಚ್ಚರಿಕೆಯನ್ನು ಕೊಡುವುದರ ಜೊತೆಗೆ ಸಮಸಮಾಜದ ನಿರ್ಮಾಣಕ್ಕೆ ಪ್ರಭುತ್ವದ ಪಾತ್ರವೇನು ಹಾಗೂ ಅದರ ಜವಾಬ್ದಾರಿಗಳೇನು ಎಂಬುದನ್ನು ಮನವರಿಕೆ ಮಾಡಿಕೊಟ್ಟಿದೆ. ಆ ಮೂಲಕ ಮಾದರಿ ಪ್ರಜಾಪ್ರಭುತ್ವವನ್ನು ಬಯಸಿದೆ.

**ಫಲಿತಗಳು**

- ದಲಿತ ಬಂಡಾಯ ಕಾವ್ಯ ಪ್ರಭುತ್ವ ಅಥವಾ ರಾಜ್ಯಶಾಹಿ ಪರವಾದ ಚರಿತ್ರೆಯನ್ನು ತಿರಸ್ಕರಿಸಿ ಮುಚ್ಚಿಟ್ಟ ಜನಪರವಾದ ಹೊಸ ಚರಿತ್ರೆಯನ್ನು ನಿರ್ಮಾಣ ಮಾಡಬೇಕೆಂದು ಬಯಸಿದೆ.
- ದಲಿತ ಬಂಡಾಯ ಕಾವ್ಯವು ಪ್ರಭುತ್ವ ಯಾವಾಗಲು ಉಳ್ಳವರ ಪರವಾಗಿರುತ್ತದೆ ಮತ್ತು ಅವರನ್ನು ಓಲೈಸುವ ಕೆಲಸವನ್ನು ನಿರಂತರವಾಗಿ ಮಾಡುತ್ತದೆ ಎಂದು ಪ್ರಜ್ಞಾಪೂರ್ವಕವಾಗಿ ನಿರೂಪಿಸಿದೆ.
- ದಲಿತ ಬಂಡಾಯ ಕಾವ್ಯವು ಸ್ಥಾಪಿತ ಮೌಲ್ಯಗಳನ್ನು ಮುರಿಯುವುದು ಮಾತ್ರವಲ್ಲ, ಮುರಿದ ಮೇಲೆ ಕಟ್ಟುವ ಕೆಲಸವನ್ನು ಜೊತೆಯಲ್ಲಿಯೇ ಮಾಡಿದೆ. ಪ್ರಭುತ್ವದ ತಪ್ಪುಗಳನ್ನು ಗುರುತಿಸುವುದು ಮಾತ್ರವಲ್ಲ ಪ್ರಜಾಪ್ರಭುತ್ವ ಇರಬೇಕಾದ ಮಾದರಿ ಯಾವುದು ಎಂಬುದನ್ನು ಅದರ ತಪ್ಪುಗಳನ್ನು ಗುರುತಿಸುವ ಮೂಲಕವೇ ಹೇಳಿದೆ.
- ದಲಿತ ಬಂಡಾಯ ಕಾವ್ಯವು ಸಾಮಾಜಿಕವಾಗಿ ಪೋಷಕ, ಪೋಷಿತ ಸಂಬಂಧಗಳು ಮೇಲಿನಿಂದ ಕೆಳಮುಖವಾಗಿ ರೂಪಿತವಾಗಿಲ್ಲ, ಬದಲಾಗಿ ಕೆಳಗಿನಿಂದ ಮೇಲ್ಮುಖವಾಗಿ ರಚಿಸಲ್ಪಟ್ಟಿದೆ ಎಂದು ನಿರೂಪಿಸಿದೆ.
- ದಲಿತ ಬಂಡಾಯ ಕಾವ್ಯವು ಒಡೆದು ಆಳುವ ನೀತಿಯಿಂದಲೇ ತನ್ನ ಅಸ್ಥಿತ್ವವನ್ನು ನಿರಂತರವಾಗಿ ಕಾಪಿಟ್ಟುಕೊಳ್ಳುವ ಕೆಲಸವನ್ನು ಪ್ರಭುತ್ವ ಮಾಡುತ್ತದೆ ಎಂದು ಬಲವಾಗಿ ನಂಬಿಸದೆ.
- ದಲಿತ ಬಂಡಾಯ ಕಾವ್ಯ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರಜೆಗಳನ್ನು ಆಳುವವರು ಜನಪ್ರತಿನಿಧಿಗಳಲ್ಲ, ಬಂಡವಾಳಶಾಹಿಗಳ ಕೈಗೊಂಬೆಯಾಗಿರುವ ಪ್ರಭುಗಳು ಎಂದು ಸ್ಪಷ್ಟವಾಗಿ ನಿರೂಪಿಸಿದೆ.

**ಪರಾಮರ್ಶನ ಗ್ರಂಥಗಳು**


- ಅಪ್ಪಗೆರೆ ಸೋಮಶೇಖರ್. (2016). ದಲಿತ ಸಂವೇದನೆ. ಲಡಾಯಿ ಪ್ರಕಾಶ, ಗದಗ.
- ಅರವಿಂದ ಮಾಲಗತ್ತಿ. (2017). ದಲಿತ ಸಾಹಿತ್ಯಯಾನ. ಗೀತಾಂಜಲಿ ಪುಸ್ತಕ ಪ್ರಕಾಶನ. ಶಿವಮೊಗ್ಗ.
- ಅರವಿಂದ ಮಾಲಗತ್ತಿ. (1997). ದಲಿತ ಸಾಹಿತ್ಯ ಪ್ರವೇಶಿಕೆ. ಪೃಥ್ವಿ ಉದ್ಯಮ ಕೇಂದ್ರ, ಮೈಸೂರು.

- ಮುಳ್ಳೂರು ನಾಗರಾಜ್. (2019). ಸಮಗ್ರ ಸಾಹಿತ್ಯ ಸಂಪುಟ–2. ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.
- ಮೂಡ್ನಾಕೂಡ ಚಿನ್ನಸ್ವಾಮಿ. (2018). ಸಮಗ್ರ ಸಂಪುಟ–1– ಕಾವ್ಯ. ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.
- ಸಿದ್ಧಲಿಂಗಯ್ಯ. (2016). ಊರು ಸಾಗರವಾಗಿ, ಅಂಕಿತ ಪ್ರಕಾಶನ, ಬೆಂಗಳೂರು.
- ಸುಜ್ಞಾನಮೂರ್ತಿ ಬಿ, (ಅನು.) (2016). ದಲಿತತ್ವ, ಲಡಾಯಿ ಪ್ರಕಾಶ, ಗದಗ.
- ಹನುಮಂತಯ್ಯ ಎಲ್. (2019). ಸಮಗ್ರ ಸಾಹಿತ್ಯ ಸಂಪುಟ–1, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.
- ಹಿರೇಮಠ ಎಸ್. ಎಸ್. (2018). ದಲಿತ ಸಂಸ್ಕೃತಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.